**ಓ.ಎಸ್. ನಂ. 32/2022** **ಡಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 13.2.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಬಿ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ನನ್ನನ್ನು ಸಾಕ್ಷಿ ನುಡಿಯಲು ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ವಾದಿಯು ಪ್ರತಿವಾದಿಯರ ವಿರುದ್ಧ ಯಾವ ಪರಿಹಾರ ಕೋರಿ ದಾವೆ ಹಾಕಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನಗೆ ದಾವಆಸ್ತಿಗಳ ಸರ್ವೆ ನಂಬರ್ ಗೊತ್ತಿರುವುದಿಲ್ಲ. ನನಗೆ ಗಿಡ್ಡಮ್ಮರವರ ಪರಿಚಯವಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪಂಚಾಯಿತಿ ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ದಾವಆಸ್ತಿಗಳು ವಾದಿ ಮತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ವಾದಿಯು 1 ನೇ ಪ್ರತಿವಾದಿಗೆ 4 ಸಾವಿರ ಹಣ ಪಡೆದು ಪತ್ರ ಬರೆದುಕೊಟ್ಟಿರುತ್ತಾರೆ ಎನ್ನುವರು. ಪಂಚಾಯಿತಿಯಲ್ಲಿ ಯಾವ ದಾಖಲೆ ಬರವಣಿಗೆ ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನಗೆ ಈ ದಾವೆಯ ಬಗ್ಗೆ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿರುವ ಮಾಹಿತಿ ಇರದಿದ್ದರೂ ಸಹ ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.